ಪ್ರಜಾವಾಣಿ




# ಜೈನ್ ಉತ್ಸವ

**ಜೈನ್** ವಿಶ್ವವಿದ್ಯಾಲಯ ಇತ್ತೀಚೆಗೆ 'ಎಲೀನ 1.0' ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ ಆಯೋಜಿಸಿತ್ತು. ವಾಣಿಜ್ಯ, ಮ್ಯಾನೇಜ್‌ಮೆಂಟ್ ಹಾಗೂ ಆ್ಯನಿಮೇಷನ್ ವಿಭಾಗಗಳು ಸೇರಿ ಈ ಉತ್ಸವ ಹಮ್ಮಿಕೊಂಡಿದ್ದು ಒಟ್ಟು 15 ಕಾಲೇಜಿನ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಸಪ್ರಶ್ನೆ, ಸಾಮೂಹಿಕ ನೃತ್ಯ ಹಾಗೂ ಗಾಯನ, ಫೋಟೊಗ್ರಾಫಿ, ಫೇಸ್ ಪೇಂಟಿಂಗ್ ಹಾಗೂ ಇನ್ನು ಹಲವಾರು ಸ್ಪರ್ಧೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ ಸಂತಸಪಟ್ಟರು.

ಈ ಸಂದರ್ಭದಲ್ಲಿ ಪೂಜಾಕುಣಿತ ಹಾಗೂ ಫ್ಯಾಷನ್ ಷೋಗಳ ಪ್ರದರ್ಶನವೂ ಆಯಿತು. ನಟ ಶ್ರೀಮುರಳಿ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಬಂದದ್ದು ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಉತ್ಸಾಹ ಹೆಚ್ಚಿಸಿತ್ತು. ❖

